<u>ಅಸಲು ದಾವಾ ಸಂಖ್ಯೆ: **-89/2022**</u> ಡಿ.ಡಬ್ಲ್ಯೂ:**-1**

ದಿನಾಂಕಃ **23.01.2026** ರಂದು ಸಾಕ್ಷಿಯು ನ್ಯಾಯಾಲಯಕ್ಕೆ ಹಾಜರಾಗಿದ್ದು ಪ್ರಮಾಣ ವಚನ ಬೋಧಿಸಲಾಯಿತು.

<u>ಪಾಟೀ ಸವಾಲು :- ವಾದಿ ಪರ ವಕೀಲರಿಂದ :-</u>

ವಾದಿ 1 ರಿಂದ 4 ರವರ ತಾಯಿ 1 ನೇ ಪ್ರತಿವಾದಿ ಎಂದರೆ ಸರಿ. 1 ರಿಂದ 4 ನೇ ವಾದಿಗಳ ತಂದೆಯ ಹೆಸರು ಮಹಮದ್ ಅಲಿ ಎಂದರೆ ನನಗೆ ಗೊತ್ತಿಲ್ಲ. ಮಹಮದ್ ಅಲಿ ಗೊತ್ತು. ವಾದಿಗಳು ಮಹಮದ್ ಅಲಿಯ ಮಕ್ಕಳು ಎಂಬ ಬಗ್ಗೆ ನನಗೆ ಗೊತ್ತಿಲ್ಲ. ಮಹಮದ್ ಅಲಿಯ ತಾಯಿಯ ಹೆಸರು ಜಮಲಾಬಿ ಎಂದರೆ ನನಗೆ ಗೊತ್ತಿಲ್ಲ. ದಾವಾ ಆಸ್ತಿಯ ಸರ್ವೇ ನಂ.18 ಇರಬಹುದು. ದಾವಾ ಆಸ್ತಿಯಲ್ಲಿ 1 ಎಕರೆ ಜಮೀನು ಇರುತ್ತದೆ. ದಾವಾ ಆಸ್ತಿಯು ಮೂಲತಃ ಯಾರಿಗೆ ಸೇರಿದ್ದು ಎಂದರೆ ಸಾಕ್ಷಿಯು ದರಕಾಸ್ತು ಜಮೀನು ಆದರೆ ಯಾರಿಗೆ ಸೇರಿದ್ದು ಎಂದು ನನಗೆ ಗೊತ್ತಿಲ್ಲ. ನನ್ನ ಪ್ರತಿವಾದ ಪತ್ರದಲ್ಲಿ ಮತ್ತು ಮುಖ್ಯ ವಿಚಾರಣೆ ಪ್ರಮಾಣ ಪತ್ರದಲ್ಲಿ ದಾವಾ ಆಸ್ತಿಯು ದರಕಾಸ್ತು ಜಮೀನು ಎಂದು ನಮೂದು ಮಾಡಿದ ಬಗ್ಗೆ ನನಗೆ ನೆನಪಿಲ್ಲ. ನನ್ನ ಪ್ರತಿವಾದ ಪತ್ರದಲ್ಲಿ ಮತ್ತು ನನ್ನ ಮುಖ್ಯ ವಿಚಾರಣೆ ಪ್ರಮಾಣ ಪತ್ರದಲ್ಲಿ ದರಕಾಸ್ತು ಜಮೀನು ಎಂದು ನಮೂದು ಮಾಡಿಲ್ಲ ಎಂದರೆ ಸರಿಯಲ್ಲ. ದಾವಾ ಆಸ್ತಿಯು ಮೂಲತಃ ಮಹಮದ್ ಹುಸೇನ್ ಸಾಬ್ ರವರಿಗೆ ಸೇರಿದ್ದು ಎಂದರೆ ಸರಿ. ಸಾಕ್ಷಿಯು ಮುಂದುವರೆದು ಸರ್ಕಾರದಿಂದ ಅವರ ಹೆಸರಿಗೆ ಮಂಜೂರು ಮಾಡಿದ್ದಾರೆ ಎಂದು ನುಡಿಯುತ್ತಾರೆ.

ಮುಂದುವರೆದ ಪಾಟೀ ಸವಾಲಿಗೆ ಕಾಲಾವಕಾಶ ಕೋರಿದ್ದು, ಕಾಲಾವಕಾಶ ನೀಡಲಾಯಿತು.

ಸಾ. ಹೇ. ತೆ. ನ್ಯಾ. ಬೆ. ಮಾಡಿಸಲಾಯಿತು.

ಓ. ಹೇ. ಕೇ. ಸ. ಇದೆ.

ಪ್ರಧಾನ ಸಿವಿಲ್ ನ್ಯಾಯಾಧೀಶರು ಮತ್ತು
ಜೆ.ಎಂ.ಎಫ್.ಸಿ., ಹೊನ್ನಾಳಿ.